ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 14–10–2017

ಪ್ರಕಟಣೆಯ ಕೃಪೆಗಾಗಿ

**ಉನ್ನತ ಶಿಕ್ಷಣವು ಪರೀಕ್ಷಾ ಕೇಂದ್ರೀತವಾಗಬಾರದು – ಶ್ರೀಮತಿ ಶೃತಿ ಚೇತನ್**

ಕೊಳ್ಳೇಗಾಲ 14–10–2017 : ಭಾರತದಲ್ಲಿ ಉನ್ನತ ಶಿಕ್ಷಣವು ಪರೀಕ್ಷಾ ಕೇಂದ್ರಿತವಾಗಿದೆ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸುವುದಷ್ಟೇ ವಿದ್ಯಾರ್ಥಿಗಳ ಗುರಿಯಾಗಿದೆ. ಹೀಗಾಗಿ ಅವರು ಒತ್ತಡಕ್ಕೆ ಸಿಲುಕಿ ಕಲಿಕೆ ಖುಷಿಯಿಂದ ವಂಚಿತರಾಗುತ್ತಾರೆ. ಹೊಸ ವಿಚಾರವನ್ನು ಅನ್ವೇಷಿಸುವ ಕಾರ್ಯಕ್ಕು ಮುಂದಾಗುವುದಿಲ್ಲ ಎಂದು ಮೈಸೂರಿನ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರಾದ ಶ್ರೀಮತಿ ಶೃತಿ ಚೇತನ್ ರವರು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ವಾಣಿಜ್ಯ ಮತ್ತು ನಿರ್ವಹಣಾ ಶಾಸ್ತ್ರ ಗಳ ವಿಭಾಗಗಳಿಂದ **"ಸ್ಪರ್ಧಾತ್ಮಕ ಪರೀಕ್ಷೆಗಳು"** ಎಂಬ ವಿಷಯದ ಮೇಲೆ ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಶಾಲೆ ಕಾಲೇಜುಗಳಲ್ಲಿ ಪಠ್ಯ ಪುಸ್ತಕ ವಿಚಾರ ಮಾತ್ರವಲ್ಲದೆ ಪ್ರಾಯೋಗಿಕ ಅನುಭವವನ್ನು ವಿದ್ಯಾರ್ಥಿಗಳಿಗೆ ಒದಗಿಸಬೇಕು. ರಾಷ್ಟ್ರೀಯ ಅಥವಾ ರಾಜ್ಯಮಟ್ಟದ ಅರ್ಹತಾ ಪರೀಕ್ಷೆಗಳು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪ್ರಾಯೋಗಿಕವಾಗಿ ನಡೆಸುವುದರ ಮೂಲಕ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಿದ್ಧತಾ ವಿಧಾನಗಳನ್ನು ತಿಳಿಸುವಂತಾಗಬೇಕು. ನಡೆಸುವ ಪರೀಕ್ಷೆಗಳು ಕೇವಲ ನಾಮಕಾವಸ್ತೆಗೆ ಎಂಬಂತಿರಬಾರದು. ಗುಂಪು ಚರ್ಚೆ, ಸಂದರ್ಶನ, ಕಾರ್ಯಕ್ಷಮತೆ, ಕೌಶಲ್ಯತೆ ಪ್ರಚಲಿತ ವಿದ್ಯಾಮಾನಗಳು, ವಿಜ್ಞಾನ ಮತ್ತು ತಂತ್ರಜ್ಞಾನ, ಮಾಹಿತಿ ಮತ್ತು ತಂತ್ರಜ್ಞಾನ ಇತ್ಯಾದಿಗಳ ಬಗೆಗೆ ವಿದ್ಯಾರ್ಥಿಗಳ ಜ್ಞಾನ ಸಂಪತ್ತನ್ನು ವೃದ್ಧಿಸುವ ಮೂಲಕ ಅವರ ಗುಣಮಟ್ಟವನ್ನು ಹೆಚ್ಚಿಸಬೇಕು ಎಂದು ಅಭಿಪ್ರಾಯಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸ್ನಾತಕೋತ್ತರ ಕೇಂದ್ರದ ನಿವೃತ್ತ ನಿರ್ದೇಶಕರಾದ ಪ್ರೊ. ಆರ್ ಎಂ ಚಿಂತಾಮಣಿ ಜೀವನವೆಂದರೆ ಗೆಲುವು ಮತ್ತು ಸೋಲುಗಳ ಸಮ್ಮಿಲನ, ಶಕ್ತಿಗೆ ಅನುಗುಣವಾಗಿ ಪ್ರಯತ್ನ ಹಾಕಿದರೆ ಗೆಲವು ನಿಶ್ಚಿತ. ಆದರೆ ನಮ್ಮಲ್ಲಿರುವ ದೌರ್ಬಲ್ಯದಿಂದ ನಾವು ಸೋಲುತ್ತೇವೆ. ಪರೀಕ್ಷೆಗಳೇ ಆಗಲಿ ಸ್ಪರ್ಧಾತ್ಮಕ ಪರೀಕ್ಷೆಗಳೇ ಆಗಲಿ ಸರಿಯಾದ ತಯಾರಿ ಮಾಡಿಕೊಂಡು ಯಶಸ್ಸು ಕಾಣುತ್ತೇವೆಂಬ ಆತ್ಮ ವಿಶ್ವಾಸ ಇದ್ದರೆ ಗೆಲುವಿನೆಡೆಗೆ ನಮ್ಮ ದಾರಿ ಸುಲಭವಾಗುವುದು ಖಚಿತ. ಕಾಲೇಜುಗಳಲ್ಲಿ ತಯಾರಿ ಮಾಡಿಕೊಳ್ಳುವ ಬಗ್ಗೆ ಕಾರ್ಯಾಗಾರಗಳು, ವಿಶೇಷ ಉಪನ್ಯಾಸಗಳು, ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವಂತಾಗಬೇಕು ಎಂದು ತಿಳಿಸಿದರು.

ಪ್ರಾಚಾರ್ಯ ಪ್ರೊ. ಉಮೇಶ, ಸ್ನಾತಕೋತ್ತರ ವಿಭಾಗದ ಮುಖ್ಯಸ್ಥ ಡಾ. ಎಂ. ಪ್ರಭು, ಕಾರ್ಯಗಾರದ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಆದಿತ್ಯ, ಪ್ರೊ. ಎಂ ಬಸವರಾಜು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೊದಲನೇ ಗೋಷ್ಠಿಯನ್ನು ಶ್ರೀ ಆದಿತ್ಯ, ನರಗುಂದ ಎಜುಕೇಷನ್ ಫೌಂಡೇಶನ್‌ರವರು **ಸಾಮಾನ್ಯ ಜ್ಞಾನ** ಎಂಬ ವಿಷಯದ ಮೇಲೆ, ರಡನೇ ಗೋಷ್ಠಿಯನ್ನು **"ವ್ಯವಹಾರ ಕ್ಷೇತ್ರದ ಪ್ರಸ್ತುತ ವಿದ್ಯಮಾನಗಳು"** ಎಂಬ ವಿಷಯದ ಮೇಲೆ ಪ್ರೊ. ಆರ್ ಎಂ ಚಿಂತಾಮಣಿ ಹಾಗೂ ಮೂರನೇ ಗೋಷ್ಠಿಯನ್ನು ಪ್ರೊ. ಎಂ ಬಸವರಾಜು ರವರು "ಸಾಮಾನ್ಯ ನೃಪುಣ್ಯತೆಗಳು" ಎಂಬ ವಿಷಯದ ಮೇಲೆ ನಡೆಸಿಕೊಟ್ಟರು.

ವಾಣಿಜ್ಯ ಮತ್ತು ನಿರ್ವಹಣಾ ಶಾಸ್ತ್ರ ಗಳ ವಿಭಾಗಗಳಿಂದ **"ಸ್ಪರ್ಧಾತ್ಮಕ ಪರೀಕ್ಷೆಗಳು"** ಎಂಬ ವಿಷಯದ ಮೇಲೆ ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರ. ಚಿತ್ರದಲ್ಲಿ ಪ್ರೊ. ಎಂ. ಬಸವರಾಜು, ಶ್ರೀ ಆದಿತ್ಯ, ಪ್ರೊ. ಆರ್ ಎಂ ಚಿಂತಾಮಣಿ, ಶ್ರೀಮತಿ ಶೃತಿ ಚೇತನ್, ಪ್ರಾಚಾರ್ಯ ಪ್ರೊ. ಉಮೇಶ ಹಾಗೂ ಡಾ. ಎಂ. ಪ್ರಭು ರವರನ್ನು ಕಾಣಬಹುದು.







JSS COLLEGE FOR WOMEN
A Day Workshop
on
COMPETITIVE EXAMINATIONS
(NET/SLET, IBPS, KAS, FDA/SDA)
Prof. UMESHA
Dr. M PRABHU

